# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತೆ ಮತ್ತು ಭದ್ರತೆಗಾಗಿ ಅನುಸರಿಸಬೇಕಾದ ಕ್ರಮದ ಕುರಿತು ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:** ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರ ಪತ್ರ ಸಂಖ್ಯೆ: ಮರನಿ.ಮರ/ ಮಪಾಸ/ಸುಭ/2024-25/370, ದಿನಾಂಕ: 02.07.2024

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರದಲ್ಲಿ, ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗುವ ಮಕ್ಕಳ ಯೋಗಕ್ಷೇಮ ಮತ್ತು ರಕ್ಷಣೆಯ ಹಿತದೃಷ್ಟಿಯಿಂದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅತೀ ಅಗತ್ಯವಿರುತ್ತದೆ. ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು, ಮಕ್ಕಳು ಆತ್ಮಹತ್ಯೆಗೆ ಶರಣಾಗುವುದು, ಮಕ್ಕಳ ಮೇಲೆ ದೌರ್ಜನ್ಯ, ಮಕ್ಕಳು ಓಡಿಹೋಗುವುದು ಇತ್ಯಾದಿ ಅಹಿತಕರ ಘಟನೆಗಳು ಕೆಲವು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವರದಿಯಾಗಿರುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳ ಯೋಗಕ್ಷೇಮ ಮತ್ತು ಹಿತದೃಷ್ಟಿಯಿಂದ ಸವಿವರವಾದ ಮಾರ್ಗಸೂಚಿಯನ್ನು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಯನ್ನು ಹೊರಡಿಸುವಂತೆ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 114 ಮಭಾಬ 2024, ಬೆಂಗಳೂರು, ದಿನಾಂಕ: 09-10-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಯಲ್ಲಿ, ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳ ಯೋಗಕ್ಷೇಮ ಮತ್ತು ರಕ್ಷಣೆಯ ಹಿತದೃಷ್ಟಿಯಿಂದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಅನುವಾಗುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಸವಿವರವಾದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

9/10/24

**(ಆರ್. ಲತಾ)**

ಸರ್ಕಾರದ ಅಧೀನ ಕಾರ್ಯದರ್ಶಿ-3,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಕಾನೂನು ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಅಡ್ವೋಕೇಟ್ ಜನರಲ್, ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು.

5. ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಸಿದ್ದಪ್ಪ ರಸ್ತೆ, ಬೆಂಗಳೂರು.
6. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು.
7. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಯೋಜನಾ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು
9. ಎಲ್ಲಾ ಜಿಲ್ಲಾಧಿಕಾರಿಗಳು (ನಿರ್ದೇಶಕರ ಮುಖಾಂತರ)
10. ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು. (ನಿರ್ದೇಶಕರ ಮುಖಾಂತರ)

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ವಿಕಾಸ ಸೌಧ ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ವಿಕಾಸ ಸೌಧ ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

*****

**ಸರ್ಕಾರದ ಆದೇಶ ಸಂಖ್ಯೆ:ಮಮಇ 114 ಮಭಾಬ 2024**
**ದಿನಾಂಕ:09.10.2024.**

## ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತೆ ಮತ್ತು ಭದ್ರತೆಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು ಮಾರ್ಗಸೂಚಿ

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗುವ ಮಕ್ಕಳ ಯೋಗಕ್ಷೇಮ ಮತ್ತು ರಕ್ಷಣೆಯ ಹಿತದೃಷ್ಟಿಯಿಂದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸುರಕ್ಷತೆ ಮತ್ತು ಭದ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅತೀ ಅಗತ್ಯವಿರುತ್ತದೆ.

ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು, ಮಕ್ಕಳು ಆತ್ಮಹತ್ಯೆಗೆ ಶರಣಾಗುವುದು, ಮಕ್ಕಳಮೇಲೆ ದೌರ್ಜನ್ಯ, ಮಕ್ಕಳು ಓಡಿಹೋಗುವುದು ಇತ್ಯಾದಿ ಅಹಿತಕರ ಘಟನೆಗಳು ಕೆಲವು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವರದಿಯಾಗಿರುವ ಹಿನ್ನೆಲೆಯಲ್ಲಿ ಮಕ್ಕಳ ಯೋಗಕ್ಷೇಮ ಮತ್ತು ಹಿತದೃಷ್ಟಿಯಿಂದ ಮಕ್ಕಳ ರಕ್ಷಣೆಗಾಗಿ ಕೆಳಕಂಡಂತೆ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ.

**ಭ್ರದತಾ ಮತ್ತು ಸುರಕ್ಷತೆಗಾಗಿ ಸಾಮಾನ್ಯ ಕ್ರಮಗಳು (ನಿಯಮ 67):**

- ಮಕ್ಕಳ ಪಾಲನಾ ಸಂಸ್ಥೆಗಳ ಉದ್ದೇಶ, ಮಕ್ಕಳ ಸಂಖ್ಯೆ, ಹಿನ್ನೆಲೆ, ವಯಸ್ಸನ್ನು ಗಮನದಲ್ಲಿಟ್ಟುಕೊಂಡು ಸಾಕಷ್ಟು ಸಂಖ್ಯೆಯಲ್ಲಿ ಭದ್ರತಾ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಾಗ ಮಾಜಿ ಸೈನಿಕರು ಅಥವಾ ಪುನರ್ವಸತಿ ಮಹಾ ನಿರ್ದೇಶನಾಲಯದ ಮೂಲಕ ಶಿಫಾರಸ್ಸು ಮಾಡಿದ ಏಜೆನ್ಸಿಗಳ ಮುಖಾಂತರ ನೇಮಿಸಿಕೊಳ್ಳಲು ಆದ್ಯತೆ ನೀಡುವುದು.
- ಬಾಲಕಿಯರ ಬಾಲಮಂದಿರಗಳಿಗೆ ಭದ್ರತೆಗಾಗಿ ಮಹಿಳಾ ಸಿಬ್ಬಂದಿಗಳನ್ನೇ ನೇಮಿಸಿಕೊಳ್ಳುವುದು ಮತ್ತು ಹೊರಗಿನಿಂದ ಸಂಸ್ಥೆಯ ಭದ್ರತೆಗಾಗಿ ಅಗತ್ಯವಿದ್ದಲ್ಲಿ ಪುರಷ ಸಿಬ್ಬಂದಿಗಳನ್ನು ನಿಯೋಜಿಸಬಹುದು.
- ಪ್ರತಿ ಪಾಳಿಯಲ್ಲೂ ಸಾಕಷ್ಟು ಭದ್ರತಾ ಸಿಬ್ಬಂದಿಗಳು ಗುರುತಿಸಲಾದ ಸೂಕ್ಷ್ಮ ಪ್ರದೇಶಗಳಲ್ಲಿ ಹಾಜರಿದ್ದು, ಕಣ್ಗಾವಲು ಇರಬೇಕು.
- ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಗುವನ್ನು ಸ್ವೀಕರಿಸಿದ ದಿನದಂದೇ ಅಥವಾ ಮರು ದಿನ ಮಗುವಿನ ಫೋಟೋವನ್ನು ತೆಗೆದು ಅವಶ್ಯಕ ದಾಖಲಾತಿಗಳಲ್ಲಿ ಅಳವಡಿಸುವುದು. ಹಾಗೂ ನಿಗದಿಪಡಿಸಿದ ಪೋರ್ಟಲ್ ನಲ್ಲಿ ಛಾಯಾ ಚಿತ್ರದೊಂದಿಗೆ ವಿವರಗಳನ್ನು ದಾಖಲಿಸಬೇಕು (Track child portal ಅಥವಾ ಖೋಯಾ ಪಾಯಾ).
- ಭದ್ರತಾ ಸಿಬ್ಬಂದಿಗಳ ಡ್ಯೂಟಿ ರೋಸ್ಟರ್‌ನ್ನು ತಯಾರಿಸಿ ಸಂಸ್ಥೆಯ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಬೇಕು.
- ಸಿಬ್ಬಂದಿಗಳಿಗೆ ಮಕ್ಕಳ ನಡುವೆ ಅಶಾಂತಿ ಉಂಟು ಮಾಡುವ ಯಾವುದೇ ಘಟನೆಗಳು ನಡೆದಿದ್ದರೆ ಅಥವಾ ಸಂಭವಿಸಬಹುದಾದ ಬಗ್ಗೆ ಮಾಹಿತಿ ದೊರೆತಲ್ಲಿ ವಿಳಂಬ ಮಾಡದೇ ಅಧೀಕ್ಷಕರು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಗಮನಕ್ಕೆ ತರುವುದು.

- ಅಧೀಕ್ಷಕರು ಆಗಿಂದಾಗ್ಗೆ ಅಥವಾ ಕನಿಷ್ಠ ವಾರಕ್ಕೊಮ್ಮೆ ರಾತ್ರಿ ಸಮಯದಲ್ಲಿ ಮಕ್ಕಳ ಪಾಲನಾ ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡತಕ್ಕದ್ದು ಹಾಗೂ ಭೇಟಿ ಸಮಯದಲ್ಲಿ ಗಮನಿಸಿದ ಅಂಶಗಳನ್ನು ಅದಕ್ಕಾಗಿಯೇ ಇರುವ ವಹಿಯಲ್ಲಿ ದಾಖಲಿಸತಕ್ಕದ್ದು.

- ಮಕ್ಕಳ ಪಾಲನಾ ಸಂಸ್ಥೆಯ ಹೊರಗೆ ಅಥವಾ ಒಳಗೆ ಯಾವುದೇ ದೊಂಬಿ, ಅಡಚಣೆ, ಅಹಿತಕರ ಘಟನೆಗಳು ಉಂಟಾದ ಸಂದರ್ಭದಲ್ಲಿ ಶಿಫ್ಟ್ ಇನ್ ಚಾರ್ಜ್ ಮೊದಲಿಗೆ ಮಕ್ಕಳಿಗೆ ಎಚ್ಚರಿಕೆ ನೀಡಬೇಕು ಮತ್ತು ಅಧೀಕ್ಷಕರ ಅನುಮತಿಯೊಂದಿಗೆಪೊಲೀಸ್‌ರ ಬೆಂಬಲ ಪಡೆಯಬೇಕು.

- ನೈಸರ್ಗಿಕ ವಿಕೋಪ, ಬೆಂಕಿ ಅಥವಾ ಯಾವುದೇ ವಿಪತ್ತಿನ ಸಂದರ್ಭದಲ್ಲಿ ಮಕ್ಕಳನ್ನು ತಕ್ಷಣವೇ ಸ್ಥಳಾಂತರಿಸಲು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲಾಗಿರುವ ವಿಪತ್ತು ನಿರ್ವಹಣಾ ಪ್ರೋಟೋಕಾಲ್ ನಂತೆ ಕ್ರಮವಹಿಸಬೇಕು. ಆಯಾಯ ಜಿಲ್ಲಾ ವಿಪತ್ತು ನಿರ್ವಹಣಾ ಕೋಶ ಇವರೊಂದಿಗೆ ಸಂಪರ್ಕದಲ್ಲಿದ್ದು ತರಬೇತಿ ಪಡೆಯುವುದು ಹಾಗೂ ಪೂರ್ವ ಸಿದ್ಧತೆಗಾಗಿ ಕ್ರಿಯಾ ಯೋಜನೆ ರೂಪಿಸಿಕೊಳ್ಳುವುದು. ಎಲ್ಲಾ ಅಧಿಕಾರಿ/ ಸಿಬ್ಬಂದಿ, ಮಕ್ಕಳು ಮತ್ತು ರಕ್ಷಕರಿಗೆ ಅಣಕು ಅಭ್ಯಾಸ ನಡೆಸಬೇಕು.

- ಮಕ್ಕಳ ಖಾಸಗಿತನ ಮತ್ತು ಘನತೆಗೆ ಧಕ್ಕೆಬಾರದಂತೆ ಕ್ಲೋಸ್ಡ್ ಸರ್ಕ್ಯೂಟ್ ಟೆಲಿವಿಷನ್ ಕ್ಯಾಮಾರಗಳನ್ನು ಮಕ್ಕಳ ಪಾಲನಾ ಸಂಸ್ಥೆಗಳ ಆಗಮನ, ನಿರ್ಗಮನ ಪಾಯಿಂಟ್‌ಗಳು, ಸ್ವಾಗತ ಘಟಕ, ಕಾರಿಡಾರ್‌ಗಳು, ಅಡುಗೆ ಮನೆ, ಪ್ಯಾಂಟ್ರಿ, ಡಾರ್ಮಿಟರಿ ಇತ್ಯಾದಿ ಪ್ರಮುಖ ಸ್ಥಳಗಳಲ್ಲಿ ಅಳವಡಿಸಬೇಕು.

- ಕಟ್ಟಡದ ಮೇಲ್ಛಾವಣಿಯ ಮೇಲೆ ಸುತ್ತಲೂ ಗ್ರಿಲ್ ಅಳವಡಿಸುವ ಮೂಲಕ ಬೀಳದಂತೆ, ಜಿಗಿದು ಓಡದಂತೆ ಎಚ್ಚರಿಸುವುದು.

- ಕಿಟಕಿಗಳಿಗೆ ಹೊರಭಾಗದಿಂದ ಗ್ರಿಲ್ ಅಳವಡಿಸುವುದು.

- ವಿದ್ಯುತ್ ಸ್ಥಾಪನೆಗಳ ನಿಯಮಿತ ತಪಾಸಣೆ ನಡೆಸುವುದು (ನಿಯಮ-29, (10, ii))
- ಅಡುಗೆ ಮನೆಯಲ್ಲಿರುವ ಚಾಕು, ಇಳಿಗೆ ಮನೆ ಇತ್ಯಾದಿ ಹರಿತಾದ ವಸ್ತುಗಳನ್ನು ಮಕ್ಕಳು ದುರ್ಬಳಕೆ ಮಾಡದಂತೆ ಅಡುಗೆ ಸಿಬ್ಬಂದಿ ಜಾಗ್ರತೆ ವಹಿಸುವುದು
- ನೀರಿನ ಸಂಪು, ನೀರಿನ ಟ್ಯಾಂಕ್‌ನ ಮುಚ್ಚಳ ಸದಾ ಮುಚ್ಚಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು ಮತ್ತು ನಿಯಮಿತವಾಗಿ ಸ್ವಚ್ಛಗೊಳಿಸಲು ಕ್ರಮವಹಿಸಬೇಕು.
- ಮಕ್ಕಳು ಬೆಂಕಿಯ ಬಳಿ ಬಾರದಂತೆ,ವಿದ್ಯುಸ್ಥಾನ ಉಪಕರಣಗಳಾದ ಮಿಕ್ಸಿ ಗ್ರೈಂಡರ್, ವಾಷಿಂಗ್ ಮೆಷಿನ್ಗಳನ್ನು ಮಕ್ಕಳು ತಾವೇ ಚಾಲನೆ ಮಾಡದಂತೆ ಎಚ್ಚರಿಕೆ ವಹಿಸುವುದು.
- ದಿನಕ್ಕೆ ಎರಡು ಬಾರಿ ಮಕ್ಕಳ ಹಾಜರಾತಿ ನಿರ್ವಹಿಸುವುದು ಮತ್ತು ಅಧೀಕ್ಷಕರಿಂದ ದೃಢೀಕರಿಸುವುದು.

**ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹಿಂಸೆ, ಶೋಷಣೆ ಮುಕ್ತಮಕ್ಕಳ ಸ್ನೇಹಿ ವ್ಯವಸ್ಥೆ ಮತ್ತು ಮಕ್ಕಳ ಮೇಲೆ ದೌರ್ಜನ್ಯಗಳ ಕುರಿತು ಶೂನ್ಯ ಸಹಿಷ್ಣುತೆಯ ನೀತಿ :**

- ಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಯೂ ಬಾಲ ನ್ಯಾಯ ಮಾದರಿ ನಿಯಮಗಳು, ನಿಯಮ 76ರನ್ವಯ ಮಕ್ಕಳ ಮೇಲೆ ಯಾವುದೇ ರೀತಿಯ ಶೋಷಣೆ, ಹಿಂಸೆ, ನಿರ್ಲಕ್ಷ್ಯ ಆಗದಂತಹ ಮಕ್ಕಳ ಸ್ನೇಹಿಯಾಗಿರುವ **ದೌರ್ಜನ್ಯ ಮುಕ್ತ ವ್ಯವಸ್ಥೆ** ಹಾಗೂ ಮಕ್ಕಳ ಮೇಲೆ ಮಾನಸಿಕ, ದೈಹಿಕ, ಲೈಂಗಿಕ ದೌರ್ಜನ್ಯಗಳ ಕುರಿತು **ಶೂನ್ಯ ಸಹಿಷ್ಣುತೆ** ಹೊಂದಿರುವತನ್ನದೇ ಆದ ಮಕ್ಕಳ ರಕ್ಷಣಾ ನೀತಿ ಹಾಗೂ ವ್ಯವಸ್ಥೆಯನ್ನು ಹೊಂದಿರಬೇಕು ಮತ್ತು ಮಕ್ಕಳೊಂದಿಗೆ ಒಡನಾಡುವ ಎಲ್ಲಾ ಸಿಬ್ಬಂದಿಗಳಿಗೂಕಾಲ ಕಾಲಕ್ಕೆ ತರಬೇತಿ ನೀಡಿ ಈ ಕುರಿತು ಸಂವೇದನಾಶೀಲರಾಗಿಸಬೇಕು.

**ವ್ಯವಸ್ಥಾಪನಾ ಸಮಿತಿ:**

- ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016ರ ನಿಯಮ-39 ರನ್ವಯ ಮಕ್ಕಳ ಪಾಲನಾ ಸಂಸ್ಥೆಗಳ ಅಧೀಕ್ಷಕರು / ಮುಖ್ಯಸ್ಥರುಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಗಳಲ್ಲೂ ಮಕ್ಕಳ ಯೋಗಕ್ಷೇಮ, ಸುರಕ್ಷತೆ ಮತ್ತು ಪ್ರಗತಿಯನ್ನು ಖಾತ್ರಿ ಪಡಿಸಿಕೊಳ್ಳಲು ಕಡ್ಡಾಯವಾಗಿ ವ್ಯವಸ್ಥಾಪನಾ ಸಮಿತಿರಚಿಸಿ, ಸಮಿತಿಗಳು ನಿಗದಿತ ಅವಧಿಯಲ್ಲಿ ನಡೆದು ಮಕ್ಕಳ ಕುಂದುಕೊರತೆಗಳನ್ನು ನೀಗಿಸಲು ನಿಯಮಾನುಸಾರ ಕಾರ್ಯ ನಿರ್ವಹಿಸುವಂತೆ ಕ್ರಮವಹಿಸಬೇಕು.

**ಮಕ್ಕಳ ಸಮಿತಿ:**

- ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016ರ ನಿಯಮ-40 ರನ್ವಯ ಮಕ್ಕಳ ಪಾಲನಾ ಸಂಸ್ಥೆಗಳ 06-10 ವರ್ಷಗಳು, 11-15 ವರ್ಷಗಳು ಮತ್ತು 16-18 ವರ್ಷಗಳ ಮಕ್ಕಳಿಗಾಗಿ ಮಕ್ಕಳಿಂದಲೇ ಪ್ರತ್ಯೇಕ ಮಕ್ಕಳ ಸಮಿತಿಗಳನ್ನು ರಚಿಸಿ, ನಿಯಮಿತವಾಗಿ ಪ್ರತಿ ತಿಂಗಳು ಸಭೆ ನಡೆಯಲು ಕ್ರಮವಹಿಸಬೇಕುಮತ್ತು ನಡವಳಿ ಪುಸ್ತಕ ನಿರ್ವಹಿಸಬೇಕು.
- ಮಕ್ಕಳು ಸಂಸ್ಥೆಯ ವಾತಾವರಣ, ಸೌಕರ್ಯಗಳ ಕುಂದು ಕೊರತೆ ಕುರಿತು ಮತ್ತು ಸಿಬ್ಬಂದಿ ಅಥವಾ ಇತರೆ ಮಕ್ಕಳಿಂದ ಮಕ್ಕಳ ಮೇಲೆ ಯಾವುದೇ ರೀತಿಯ ಹಿಂಸೆ, ಶೋಷಣೆ ಆಗುತ್ತಿದ್ದಲ್ಲಿ, ಈ ಸಮಿತಿಯಲ್ಲಿ ಚರ್ಚಿಸಿ ನಡವಳಿ ದಾಖಲಿಸಿ ವ್ಯವಸ್ಥಾಪನಾ ಸಮಿತಿಗೆ ಸಲ್ಲಿಸಬೇಕು.ಸಂಸ್ಥೆಯ ಅಧೀಕ್ಷಕರು, ವ್ಯವಸ್ಥಾಪನಾ ಸಮಿತಿಯ ಸಭೆಯ ಮುಂದೆ ಈ ನಡವಳಿಗಳನ್ನು ಮಂಡಿಸಬೇಕು.

**ಮಕ್ಕಳ ಪಾಲನಾ ಸಂಸ್ಥೆಗಳ ನಿಯಮಿತ ಭೇಟಿ, ಪರಿಶೀಲನೆ ಮತ್ತು ಮೇಲ್ವಿಚಾರಣೆ:**

- ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆಯ ಸೆಕ್ಷನ್-54, ಮಾದರಿ ನಿಯಮಗಳು 2016ರ ನಿಯಮ-41 ರನ್ವಯ ರಾಜ್ಯ ಸರ್ಕಾರದಿಂದ ರಚಿಸಲಾಗಿರುವ ರಾಜ್ಯ ಮತ್ತು ಜಿಲ್ಲಾ ತನಿಖಾ ಸಮಿತಿಗಳು ಕನಿಷ್ಠ 03 ತಿಂಗಳಿಗೊಮ್ಮೆಕಡ್ಡಾಯವಾಗಿ ಎಲ್ಲಾ ಮಕ್ಕಳ ಪಾಲನಾ ಸಮಿತಿಗಳಿಗೂ ಭೇಟಿ ನೀಡಿ ಮಕ್ಕಳ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಾತ್ರಿ ಪಡಿಸಿಕೊಳ್ಳಬೇಕು.

- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಸಂಸ್ಥೆಯ ಭೇಟಿ ವೇಳೆ ಕಡ್ಡಾಯವಾಗಿ ಸಿಬ್ಬಂದಿಗಳ ಅನುಪಸ್ಥಿಯಲ್ಲಿ ಮಕ್ಕಳೊಂದಿಗೆ ಸಂವಾದಿಸಿ ಅವರ ಯೋಗಕ್ಷೇಮವನ್ನು ಖಾತರಿಪಡಿಸಿಕೊಳ್ಳುವುದು.
- ಸಂಸ್ಥೆಯ ಅಧೀಕ್ಷಕರು ದಿನವೊಂದಕ್ಕೆ ಕನಿಷ್ಠ 02 ಬಾರಿ ಮಕ್ಕಳ ಪಾಲನಾ ಸಂಸ್ಥೆಯ ತಪಾಸಣೆ ನಡೆಸುವುದು ಮತ್ತು ಸಂಸ್ಥೆಯ ಸ್ವಚ್ಛತೆ, ಶುಚಿಯಾದ ಆಹಾರದ ತಯಾರಿಕೆ, ದಾಸ್ತನು, ಭದ್ರತಾ ವ್ಯವಸ್ಥೆ, ಮಕ್ಕಳ ಸುರಕ್ಷತೆ ಖಾತ್ರಿ ಪಡಿಸಿಕೊಳ್ಳುವುದು.
- ಸಂಸ್ಥೆಯ ಮಕ್ಕಳ ಕಲ್ಯಾಣ ಅಧಿಕಾರಿ / ಗೃಹಪಾಲಕರು ಮಗುವಿನ ಸುರಕ್ಷತೆ, ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಪ್ರತಿ ದಿನ ಮಗುವನ್ನು ಭೇಟಿ ಮಾಡಿ ಪಾಲನಾ ಸಂಸ್ಥೆಯ ಜೀವನಕ್ಕೆ ಹೊಂದಿಕೊಳ್ಳಲು ಮಗುವಿಗೆ ಸಹಾಯ ಮಾಡಬೇಕು. ಹೊಸದಾಗಿ ದಾಖಲಾದ ಮಗುವನ್ನು 01ಕ್ಕಿಂತ ಹೆಚ್ಚು ಬಾರಿ ಭೇಟಿ ಮಾಡಿ ಯೋಗಕ್ಷೇಮವನ್ನು ವಿಚಾರಿಸಬೇಕು.

**ಸಲಹಾ / ದೂರು ಪೆಟ್ಟಿಗೆಗಳ ಸ್ಥಾಪನೆ:**

- ವ್ಯವಸ್ಥಾಪನಾ ಸಮಿತಿಯು ಕಛೇರಿ ವಾತಾವರಣದಿಂದ ದೂರವಾದ, ಸಿ.ಸಿ ಟಿವಿ ಇಲ್ಲದ ಸ್ಥಳದಲ್ಲಿ ಮತ್ತು ಮಕ್ಕಳ ಮಲಗುವ ಕೋಣೆಗಳಿಗೆ ಹತ್ತಿರವಾಗಿ ಸಲಹಾ ಪೆಟ್ಟಿಗೆಯನ್ನು ಅಳವಡಿಸಿ, ಪ್ರತಿ ವಾರ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅಥವಾ ಅವರ ಪ್ರತಿನಿಧಿಯೊಬ್ಬರು ಸಲಹಾ ಪೆಟ್ಟಿಗೆಯನ್ನು ತೆರೆದು ಪರಿಶೀಲಿಸಿ ಮಕ್ಕಳ ಅಹವಾಲುಗಳಿಗೆ ಸ್ಪಂದಿಸಬೇಕು. ಸಲಹಾ ಪೆಟ್ಟಿಗೆಯ ಕೀ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಬಳಿಯೇ ಇರಬೇಕು.
- ತುರ್ತು ನಿಗಾವನ್ನು ಬಯಸುವ ಸಮಸ್ಯೆಗಳಿದ್ದಲ್ಲಿ ಕೂಡಲೇ ವ್ಯವಸ್ಥಾಪನಾ ಸಮಿತಿಯ ಸಭೆ ಕರೆದು ಅಗತ್ಯ ಕ್ರಮವಹಿಸಬೇಕು ಮತ್ತು ಅನುಪಾಲನೆ ಮಾಡಬೇಕು.
- ಬಾಲ ನ್ಯಾಯ ಮಾದರಿ ನಿಯಮಗಳ, ನಿಯಮ 17ರಲ್ಲಿ ತಿಳಿಸಿರುವಂತೆ ಮಕ್ಕಳ ಕಲ್ಯಾಣ ಸಮಿತಿಯು ಸಮಿತಿಯ ಆವರಣದಲ್ಲಿ ಮಕ್ಕಳು ತಮ್ಮ ಸಲಹೆ, ಕುಂದು ಕೊರತೆಗಳನ್ನು ಸಲ್ಲಿಸಲು ಸಾಧ್ಯವಾಗುವಂತೆ, ಸಲಹಾ ಪೆಟ್ಟಿಗೆಗಳನ್ನು ಸ್ಥಾಪಿಸಬೇಕು
- ಮಕ್ಕಳ ಕಲ್ಯಾಣ ಸಮಿತಿಯು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿದಾಗ ಅಥವಾ ಕನಿಷ್ಠ ತಿಂಗಳಿಗೊಮ್ಮೆ ಮಕ್ಕಳ ಸಲಹಾ ಅಥವಾ ದೂರು ಪುಸ್ತಕವನ್ನು ಪರಿಶೀಲಿಸಬೇಕು ಮತ್ತು ಪಾಲನಾ ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿಗಳ ಅನುಪ ಸ್ಥಿತಿಯಲ್ಲಿ ಮಕ್ಕಳೊಂದಿಗೆ ಸಂವಾದ ನಡೆಸಿ, ಅವರ ಅಹವಾಲು, ಸಲಹೆಗಳನ್ನು ಸ್ವೀಕರಿಸುವ ಮುಖಾಂತರ ಅವರ ಯೋಗಕ್ಷೇಮವನ್ನು ತಿಳಿದುಕೊಳ್ಳಬೇಕು

**ಮಕ್ಕಳೊಂದಿಗೆ ಕೆಲಸ ನಿರ್ವಹಿಸುವ / ಒಡನಾಡುವ ಅಧಿಕಾರಿ, ಸಿಬ್ಬಂದಿ, ಸ್ವಯಂ ಸೇವಾ ಸಂಸ್ಥೆಗಳಿಗೆ ನಿಯಮಗಳು:**

- ಹೆಣ್ಣು ಮಕ್ಕಳಪಾಲನಾ ಸಂಸ್ಥೆಗಳಲ್ಲಿ ಮಹಿಳಾ ಅಧೀಕ್ಷರು ಮತ್ತು ಮಹಿಳಾ ಸಿಬ್ಬಂದಿಗಳನ್ನೇ ನೇಮಿಸಬೇಕು (ನಿಯಮ-26, (4)).

- ಮಕ್ಕಳ ಪಾಲನಾ ಸಂಸ್ಥೆಗಳಿಗೆ ಸಂಬಂಧಿಸಿದ ಯಾವುದೇ ವ್ಯಕ್ತಿಯು ಯಾವುದೇ ಅಪರಾಧಗಳಿಗೆ ಶಿಕ್ಷೆ ಅನುಭವಿಸಬಾರದು ಅಥವಾ ಯಾವುದೇ ಅನೈತಿಕ ಕೃತ್ಯದಲ್ಲಿ ಅಥವಾ ಮಕ್ಕಳ ದುರುಪಯೋಗ, ಮಕ್ಕಳನ್ನು ಬಾಲ ಕಾರ್ಮಿಕರಾಗಿ ದುಡಿಸಿಕೊಂಡ ಹಿನ್ನೆಲೆ ಅಥವಾ ನೈತಿಕ ಕ್ಷೋಭೆಯನ್ನುಒಳಗೊಂಡಿರುವ ಅಪರಾಧದಲ್ಲಿ ಅಥವಾ ಮಕ್ಕಳೊಂದಿಗೆ ಕೆಲಸ ನಿರ್ವಹಿಸುವ ಅವರ ಅಧಿಕಾರದ ಅವಧಿಯಲ್ಲಿ ಯಾವುದೇ ರಾಜಕೀಯ ಪಕ್ಷದ ಹುದ್ದೆಯನ್ನು ಹೊಂದಿರಬಾರದು (ನಿಯಮ-26, (5)).
- ಪೊಲೀಸ್ ಪರಿಶೀಲನೆ ಇಲ್ಲದೆ ಯಾವುದೇ ವ್ಯಕ್ತಿಯನ್ನು ಮಕ್ಕಳ ಪಾಲನಾ ಸಂಸ್ಥೆಗಳಿಗೆ ನೇಮಿಸಿಕೊಳ್ಳಬಾರದು (ನಿಯಮ-26, (6)).
- ಮಕ್ಕಳ ಪಾಲನಾ ಸಂಸ್ಥೆಗಳಿಗೆ ನೇಮಿಸಿಕೊಳ್ಳಲಾಗುವ ಸಿಬ್ಬಂದಿಗಳಿಗೆ ಸಾಕಷ್ಟು ತರಬೇತಿಯನ್ನು ನೀಡಿ ಮಕ್ಕಳೊಂದಿಗೆ ಸೂಕ್ಷ್ಮವಾಗಿ ವರ್ತಿಸಲು ಮತ್ತು ಬಿಕ್ಕಟ್ಟಿನ ಪರಿಸ್ಥಿತಿಯನ್ನು ಯಾವುದೇ ಆಯುಧ ಶಸ್ತ್ರಾಸ್ತ್ರಗಳಿಲ್ಲದೆನಿಭಾಯಿಸುವ, ಸಂಸ್ಥೆಯಿಂದ ತಪ್ಪಿಸಿಕೊಂಡು ಓಡಿ ಹೋದ ಮಕ್ಕಳನ್ನು ಹುಡುಕಾಡಲು ಮತ್ತು ನಿಯಂತ್ರಿಸಲು ವಿಶೇಷ ಕೌಶಲ್ಯಗಳ ತರಬೇತಿಯನ್ನು ನೀಡಬೇಕು (ನಿಯಮ-26, (10-11)).
- ಸಂಸ್ಥೆಯ ಅಧೀಕ್ಷಕರು ತಮಗೆ ಒದಗಿಸಲಾದ ಕ್ವಾರ್ಟ್ರಸ್‌ನಲ್ಲಿಯೆ ಇದ್ದು, ಮಕ್ಕಳ ಒಟ್ಟಾರೆ ಮೇಲ್ವಿಚಾರಣೆ ಮತ್ತು ತುರ್ತು / ಬಿಕ್ಕಟ್ಟಿನ ಸಮಯದಲ್ಲಿ ಸೂಕ್ತ ನಿಲುವುಗಳನ್ನು ತೆಗೆದುಕೊಳ್ಳಬೇಕು ಹಾಗೂ ಕಾರಣಾಂತರಗಳಿಂದ ಅಧೀಕ್ಷಕರು ಮಕ್ಕಳ ಪಾಲನಾ ಸಂಸ್ಥೆಗಳ ಆವರಣದಲ್ಲಿ ವಾಸವಾಗಿಲ್ಲದ ಪ್ರಕರಣಗಳಲ್ಲಿ ಇನ್ಯಾರಾದರು ಹಿರಿಯ ಸಿಬ್ಬಂದಿಯನ್ನು ಸಂಸ್ಥೆಯಲ್ಲಿಯೇ ಉಳಿಸಲು ಕ್ರಮವಹಿಸುವುದು. ನಿಯಮ-29, (7)).
- ಗೃಹಪಾಲಕರು ಸಂಸ್ಥೆಯ ಸುರಕ್ಷತಾ ಮತ್ತು ಭದ್ರತಾ ಕ್ರಮಗಳ ಮೇಲ್ವಿಚಾರಣೆ ಮಾಡುವುದು. ಮಕ್ಕಳು ಪಾಲನಾ ಸಂಸ್ಥೆಯಿಂದ ಹೊರಗೆ ಹೋದಾಗಲೆಲ್ಲಾ ಮಕ್ಕಳಿಗೆ ಬೆಂಗಾವಲಾಗಿರಬೇಕು.
- ಮಕ್ಕಳ ಪಾಲನಾ ಸಂಸ್ಥೆಯ ಸಿಬ್ಬಂದಿ ಯಾವುದೇ ನಿಷೇಧಿತ ವಸ್ತುಗಳನ್ನು ಸಂಸ್ಥೆಯ ಒಳಗೆ ತರತಕ್ಕದ್ದಲ್ಲ. ಯಾವುದೇ ಮಧ್ಯ, ಬೀಡಿ, ತಂಬಾಕು ಅಥವಾ ಯಾವುದೇ ಇತರೆ ಅಮಲು ಭರಿಸುವ ಪದಾರ್ಥಗಳನ್ನು ಸಂಸ್ಥೆಯ ಒಳಗೆ ಸೇವಿಸಬಾರದು ಮತ್ತು ಸೇವಿಸಿ ಕರ್ತವ್ಯ ನಿರ್ವಹಿಸಬಾರದು (ನಿಯಮ 66).

**ವೈದ್ಯಕೀಯ ಆರೈಕೆ:**

- ಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಯು ಮಗುವನ್ನು ದಾಖಲು ಮಾಡಿಕೊಂಡ 24 ಗಂಟೆಯೊಳಗೆ ವೈದ್ಯಕೀಯ ತಪಾಸಣೆಗೆ ವ್ಯವಸ್ಥೆ ಮಾಡಬೇಕು ಮತ್ತು ವಿಶೇಷ ಸಂದರ್ಭಗಳಲ್ಲಿ ಅಥವಾ ತುರ್ತು ಸಂದರ್ಭಗಳಲ್ಲಿ ಕೂಡಲೇ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು.

  ಮಗುವನ್ನು ಬೇರೆ ಸಂಸ್ಥೆ / ಜಿಲ್ಲೆ / ರಾಜ್ಯ ಗಳಿಗೆ ವರ್ಗಾವಣೆ ಮಾಡುವಾಗ ವರ್ಗಾವಣೆಗೆ 24 ಗಂಟೆ ಮುಂಚಿತವಾಗಿ ವೈದ್ಯಕೀಯ ತಪಾಸಣೆ ಮಾಡಿಸಬೇಕು.

- ತ್ರೈಮಾಸಿಕ ಆರೋಗ್ಯ ತಪಾಸಣೆ ಶಿಬಿರಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಬೇಕು.
- ಪ್ರತಿಯೊಂದು ಸಂಸ್ಥೆಯಲ್ಲಿಯೂ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಇರಿಸಿ ಅದನ್ನು ಬಳಸಲು ಎಲ್ಲಾ ಸಿಬ್ಬಂದಿಗಳಿಗೆ ತರಬೇತಿ ನೀಡುವುದು.
- ಮಕ್ಕಳಿಗೆ ಅಗತ್ಯಾನುಸಾರ ರೋಗ ನಿರೋಧಕ ಚುಚ್ಚು ಮದ್ದುಗಳನ್ನು, ಲಸಿಕೆ, ಜಂತುಹುಳು ನಿವಾರಕಗಳನ್ನು ನಿಯತಕಾಲಿಕವಾಗಿ ಹಾಕಿಸುವುದು.
- ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹೆಣ್ಣು ಮಕ್ಕಳು ದಾಖಲಾದ ಸಂದರ್ಭದಲ್ಲಿ ಸಮಿತಿ / ಮಂಡಳಿ / ನ್ಯಾಯಾಲಯದ ನಿರ್ದೇಶನದಂತೆ ಗರ್ಭಾವಸ್ಥೆಯ ಪರೀಕ್ಷೆ, ಲೈಂಗಿಕ ಕಾಯಿಲೆಗಳ ತಪಾಸಣೆ ಮತ್ತು ಅಗತ್ಯವಿದ್ದಲ್ಲಿ ವೈದ್ಯಕೀಯ ಗರ್ಭಪಾತಕ್ಕೆ ನಿಯಮಾನುಸಾರ ಕ್ರಮವಹಿಸಬೇಕು.
- ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹಿಂಸೆ ಮುಕ್ತ ವಾತಾವರಣವನ್ನು ನಿರ್ಮಿಸಿ ಮಕ್ಕಳು ತಮ್ಮ ದುರ್ಬಲ ಮನಸ್ಥಿತಿಯಿಂದ ಹೊರಬಂದು, ಮಾನಸಿಕ ಸ್ಥೈರ್ಯ ಆತ್ಮವಿಶ್ವಾಸವನ್ನು ಮತ್ತೆ ಪಡೆದುಕೊಳ್ಳಲು ಆಪ್ತ ಸಮಾಲೋಚನೆ, ಅಗತ್ಯ ನೈತಿಕ ಬೆಂಬಲ ಮತ್ತು ವಾತಾವರಣ ಕಲ್ಪಿಸುವುದು.

**ಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಗಳೂ ಮಕ್ಕಳ ಸ್ನೇಹಿ ಕಟ್ಟಡ ವ್ಯವಸ್ಥೆ, ಸೌಲಭ್ಯಗಳನ್ನು ಹೊಂದಿರತಕ್ಕದ್ದು :**

- ಮಕ್ಕಳ ಪಾಲನಾ ಸಂಸ್ಥೆಗಳು ಮಕ್ಕಳ ಸ್ನೇಹಿಯಾಗಿರಬೇಕು. ಜೈಲು ಅಥವಾ ಲಾಕ್ ಅಪ್ ನಂತೆ ಇರಬಾರದು (ನಿಯಮ-29, (2)).
- ಮಕ್ಕಳ ಪಾಲನಾ ಸಂಸ್ಥೆಗಳ ಕಟ್ಟಡವು ಸಾಕಷ್ಟು ಬೆಳಕು, ತಾಪಮಾನ ನಿಯಂತ್ರಿಸುವ ವ್ಯವಸ್ಥೆ, ಸುರಕ್ಷಿತ ಕುಡಿಯುವ ನೀರು, ವಯಸ್ಸಿಗನುಗುಣವಾದ ಮಕ್ಕಳ ಸ್ನೇಹಿ, ವಿಕಲಚೇತನ ಸ್ನೇಹಿ ಸ್ವಚ್ಛ ಶೌಚಾಲಯಗಳು ಮತ್ತು ಮುಳ್ಳು ಬೇಲಿಯೊಂದಿಗೆ ಎತ್ತರದ ಕಾಂಪೌಂಡ್ ಹೊಂದಿರಬೇಕು (ನಿಯಮ-29, (9)).
- ವಿಶೇಷ ಚೇತನ ಮಕ್ಕಳಿಗಾಗಿ ವಿಶೇಷ ಮೂಲ ಸೌಕರ್ಯ ಸೌಲಭ್ಯಗಳು ಮತ್ತು ಅಗತ್ಯ ಸಲಕರಣೆಗಳನ್ನು ತಜ್ಞರ ಮಾರ್ಗದರ್ಶನದಲ್ಲಿ ವಿನ್ಯಾಸಗೊಳಿಸಬೇಕು (ನಿಯಮ-29, (11)).
- ಅಪಘಾತಗಳನ್ನು ತಡೆಗಟ್ಟಲು ಸರಿಯಾದ ಮತ್ತು ಜಾರು ಅಲ್ಲದ ನೆಲ ಹಾಸು ಇರಬೇಕು (ನಿಯಮ-29, (8)).
- ಬಾಲನ್ಯಾಯ ಕಾಯ್ದೆಯಲ್ಲಿ ತಿಳಿಸಿರುವಂತೆ, ಪ್ರತಿಯೊಂದು ಸಂಸ್ಥೆಯಲ್ಲಿಯೂ ಪ್ರಥಮ ಚಿಕಿತ್ಸಾ ಕಿಟ್, ಅಡುಗೆ ಮನೆಯಲ್ಲಿ ಅಗ್ನಿ ಶಾಮಕಗಳನ್ನು ಅಳವಡಿಸಿರಬೇಕು (ನಿಯಮ-29, (10, i)).

**ಶುಚಿತ್ವ ಮತ್ತು ನೈರ್ಮಲ್ಯ:**

- ಅಡುಗೆ ಮನೆ, ಡಾರ್ಮೆಟರಿ ಮತ್ತು ಮನರಂಜನಾ ಕೊಠಡಿಗಳಲ್ಲಿ ಮಕ್ಕಳಿಗೆ ಸುಲಭವಾಗಿ ಸಿಗುವಂತೆ ಶುದ್ಧ ಕುಡಿಯುವ ನೀರಿನ ಫಿಲ್ಟರ್‌ಗಳನ್ನು ಅಳವಡಿಸಬೇಕು.
- ಸ್ನಾನ, ಶೌಚಾಲಯಗಳು ಮತ್ತು ಬಟ್ಟೆ ಒಗೆಯುವ ಆವರಣದಲ್ಲಿ ಶುಚಿತ್ವ ಕಾಪಾಡಿಕೊಳ್ಳಬಕು.

- ಸ್ವಚ್ಛ ಮತ್ತು ನೊಣ ಮುಕ್ತವಾದ ಅಡುಗೆ ಮನೆ ಮತ್ತು ಪಾತ್ರೆ ತೊಳೆಯಲು ಪ್ರತ್ಯೇಕ ವ್ಯವಸ್ಥೆ.
- ತರಕಾರಿ ಮತ್ತು ಹಣ್ಣುಗಳನ್ನು ಸರಿಯಾಗಿ ತೊಳೆದು ಸ್ವಚ್ಛಗೊಳಿಸುವುದು ಮತ್ತು ಆಹಾರವನ್ನು ಶುಚಿಯಾಗಿ ತಯಾರಿಸುವುದು.
- ಸಂಸ್ಥೆಯ ಆವರಣದ ಸುತ್ತಮುತ್ತ ಗಿಡಗಂಟಿಗಳು ಬೆಳೆದು, ಹುಳ ಉಪ್ಪಟೆ, ಸರಸೃಪಗಳಿಂದ ಮಕ್ಕಳಿಗೆ ಅಪಾಯವಾಗುವುದನ್ನು ತಪ್ಪಿಸಲು ಕಾಲಕಾಲಕ್ಕೆ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಕ್ರಮವಹಿಸುವುದು.

**ಶೋಧಿಸುವುದು ಮತ್ತು ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳುವುದು (ನಿಯಮ - 68):**

- ಮಗುವು ಸಂಸ್ಥೆಗೆ ದಾಖಲಾದ ಸಂದರ್ಭದಲ್ಲಿ ಅಥವಾ ಅಗತ್ಯ ಸಂದರ್ಭಗಳಲ್ಲಿ ಅಧೀಕ್ಷಕರು ಅಥವಾ ಅವರಿಂದ ನಿರ್ದೇಶಿಸ್ಪಲ್ಪಟ್ಟ ಸಿಬ್ಬಂದಿಯು ಶೋಧನೆ ನಡೆಸಿ ನಿಷೇಧಿತ ವಸ್ತುಗಳು ಇದ್ದಲ್ಲಿ ವಶಪಡಿಸಿಕೊಳ್ಳತಕ್ಕದ್ದು ಮತ್ತು ವಶಪಡಿಸಿಕೊಳ್ಳಲಾದ ವಸ್ತುಗಳ ಪಟ್ಟಿಯನ್ನು ತಯಾರಿಸತಕ್ಕದ್ದು. ಬಾಲಕಿಯರನ್ನು ಮಹಿಳಾ ಸಿಬ್ಬಂದಿಯೇ ಶೋಧಿಸಬೇಕು. ಹೀಗೆ ವಶಪಡಿಸಿಕೊಂಡ ವಸ್ತುಗಳನ್ನು Personal Belongings Register ನಲ್ಲಿ ನಮೂದಿಸಿ ನಿರ್ವಹಿಸಬೇಕು, ಸಾಕ್ಷಿಯೊಬ್ಬರ ಸಮ್ಮುಖದಲ್ಲಿ ಮಗುವಿಗೆ ಓದಿ ತಿಳಿಸಬೇಕು ಮತ್ತು ಸಹಿ ಪಡೆಯಬೇಕು ಹಾಗೂ ಅಧೀಕ್ಷಕರ ಮೇಲು ಸಹಿ ಇರಬೇಕು (ನಿಯಮ-71).
- ಶಸ್ತ್ರಾಸ್ತ್ರಗಳು, ಆಯುಧಗಳು, ಅಪರಾಧ ಚಟುವಟಿಕೆಗಳಾಗಿ ಬಳಸುವ ಸಮರ್ಥ್ಯ ಇರುವ ವಸ್ತುಗಳು ಅಥವಾ ವ್ಯಸನಕಾರಿ ಪದಾರ್ಥಗಳು ಮಕ್ಕಳಿಂದ ಅಥವಾ ಡಾರ್ಮಿಟರಿಯಲ್ಲಿ ದೊರೆತಲ್ಲಿ ಅಧೀಕ್ಷಕರು ವಿಚಾರಣೆ ನಡೆಸಿ, ಅಂತಹ ಕೃತ್ಯಕ್ಕೆ ಜವಾಬ್ದಾರಿಯಾಗಿರುವ ವ್ಯಕ್ತಿಗಳನ್ನು ಕುರಿತು ತಿಳಿದುಕೊಂಡು ಪೊಲೀಸರಿಗೆ ವರದಿ ನೀಡಬೇಕು ಮತ್ತು ಸಮಿತಿ ಅಥವಾ ಮಂಡಳಿಗೆ ಆದಾಷ್ಟು ಬೇಗ ಮಾಹಿತಿಯನ್ನು ನೀಡಬೇಕು.ಜಿಲ್ಲಾ ದಂಡಾಧಿಕಾರಿಗಳು ಅಂತಹ ಅಧಿಕಾರಿ / ಬಾಹ್ಯ ಮೂಲ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮವಹಿಸಬೇಕು
- ಇಂತಹ ಕೃತ್ಯಕ್ಕೆ ಮಗುವು ಕಾರಣವಾಗಿದ್ದಲ್ಲಿ, ಬಾಲನ್ಯಾಯ ಕಾಯ್ದೆ ಮತ್ತು ನಿಯಮಗಳನ್ವಯ ಕ್ರಮವಹಿಸಬೇಕು

**ನಿಷೇಧಿತ ವಸ್ತುಗಳು (ನಿಯಮ:70)**

- ಯಾವುದೇ ವ್ಯಕ್ತಿಗಳು ಮಧ್ಯ, ಗಾಂಜ, ಅಮಲು ಪದಾರ್ಥಗಳು, ಸ್ಫೋಟಕ ವಸ್ತುಗಳು, ವಿಷಕಾರಿ ವಸ್ತುಗಳು, ಆಮ್ಲ ಮತ್ತು ರಸಾಯನಿಕಗಳು (ದ್ರವ & ಘನ), ಶಸ್ತ್ರಾಸ್ತ್ರಗಳು, ಆಯುಧಗಳು, ಕತ್ತರಿಸುವ ಉಪಕರಣಗಳು, ಆಯುಧವಾಗಿ ಬಳಸಬಹುದಾದ ಯಾವುದೇ ವಸ್ತುಗಳನ್ನು ಸಂಸ್ಥೆಯೊಳಗೆ ತರುವಂತಿಲ್ಲ.
- ಎಲ್ಲಾ ಅಶ್ಲೀಲ ವಿಷಯಗಳು.
- ದಾರ, ಹಗ್ಗ, ಸರಪಳಿ ಅಥವಾ ಸರಪಳಿ, ಹಗ್ಗವಾಗಿ ಬಳಸಬಹುದಾದ ಯಾವುದೇ ವಸ್ತುಗಳು.
- ಮರ, ಬಿದಿರು, ದೊಣ್ಣೆ, ಕೋಲು, ಏಣಿ, ಇಟ್ಟಿಗೆಗಳು, ಕಲ್ಲುಗಳು.
- ಇಸ್ಪೀಟು ಎಲೆಗಳು ಅಥವಾ ಜೂಜಿಗಾಗಿ ಬಳಸಬಹುದಾದ ಉಪಕರಣಗಳು.
- ಪಾನ್ ಮಸಾಲ ಅಥವಾ ಅಂತಹುದೆ ಇತರೆ ತಂಬಾಕು ಪದಾರ್ಥಗಳು.
- ವೈದ್ಯರು ಶಿಫಾರಸ್ಸು ಮಾಡಿರದ ಔಷಧಿಗಳು.

- ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಪರವಾಗಿ ನಿರ್ದಿಷ್ಟ ಪಡಿಸಿದ ಯಾವುದೇ ಇತರೆ ವಸ್ತುಗಳು.

**ಸಂದರ್ಶಕರ ಭೇಟಿ ಮತ್ತು ಸಂವಹನ ನಿಯಮಗಳು (ನಿಯಮ-74):**

- ಮಕ್ಕಳಲ್ಲಿ ಓಡಿ ಹೋಗುವ ಮನೋಭಾವವನ್ನು ಕಡಿಮೆ ಮಾಡಲು ಮತ್ತು ಸುರಕ್ಷಿತ ಭಾವವನ್ನು ಕಟ್ಟಿಕೊಡಲು ಪಾಲನಾ ಸಂಸ್ಥೆಯ ಪ್ರತಿ ಮಗುವಿಗೆ ತನ್ನನ್ನು ನೋಡಲು ಬರುವ ಸಂಬಂಧಿಕರನ್ನು ಭೇಟಿ ಮಾಡಲು ನಿಗದಿಪಡಿಸಿದ ದಿನದಂದು ವಾರಕೊಮ್ಮೆ ಅವಕಾಶ ಕಲ್ಪಿಸುವುದು. ವಿಶೇಷ ಸಂದರ್ಭಗಳಲ್ಲಿ ಪೋಷಕರು ಬೇರೆ ರಾಜ್ಯ ಅಥವಾ ಜಿಲ್ಲೆಯಿಂದ ಬಹಳ ದೂರದಿಂದ ಪ್ರಯಾಣಿಸಿ ಬಂದಿದ್ದರೆ ಇತರ ದಿನಗಳಲ್ಲಿ ಸಹ ಮಕ್ಕಳನ್ನು ಭೇಟಿ ಮಾಡಲು ಅವಕಾಶ ಕಲ್ಪಿಸಬಹುದು.
- ಹೊಸದಾಗಿ ದಾಖಲಾದ ಮಗುವಿನ ಪ್ರಕರಣದಲ್ಲಿ ಮೊದಲನೇ ದಿನವೇ ಪೋಷಕರ ಭೇಟಿಗೆ ಅವಕಾಶ ಮಾಡಿಕೊಡಬಹುದು.
- ಸಂದರ್ಶಕರನ್ನು ಮುಖ್ಯದ್ವಾರದಲ್ಲಿಯೇ ತಪಾಸಣೆಗೆ ಒಳಪಡಿಸತಕ್ಕದ್ದು. ಮಹಿಳಾ ಸಂದರ್ಶಕರನ್ನು ಮಹಿಳಾ ಸಿಬ್ಬಂದಿಗಳಿಂದಲೇ ತಪಾಸಣೆಗೆ ಒಳಪಡಿಸತಕ್ಕದ್ದು.
- ನಿಷೇಧಿತ ವಸ್ತುಗಳನ್ನು ತಮ್ಮೊಂದಿಗೆ ತರುವ ಪೋಷಕರಿಗೆ ಮಗುವನ್ನು ಭೇಟಿ ಮಾಡಲು ಅವಕಾಶ ಕಲ್ಪಿಸಬಾರದು. ಸದರಿ ಸಂದರ್ಶಕರ ಕುರಿತು ಮತ್ತು ಘಟನೆಯ ಕುರಿತು ವರದಿ ತಯಾರಿಸಿ ಮಂಡಳಿ ಅಥವಾ ಸಕ್ಷಮ ನ್ಯಾಯಾಲಕ್ಕೆ ಸಲ್ಲಿಸುವುದು ಮತ್ತು ಪ್ರತಿಯನ್ನು ಮಗುವಿನ ಕಡತದಲ್ಲಿ ನಿರ್ವಹಿಸುವುದು.
- ಮಕ್ಕಳನ್ನು ಭೇಟಿಯಾಗಲು ಬರುವ ಪೋಷಕರು ತಮ್ಮ ಹೆಸರು, ವಿಳಾಸದ ಪುರಾವೆ ಇತ್ಯಾದಿಗಳನ್ನು ನೀಡಬೇಕು ಮತ್ತು ವಿವರಗಳನ್ನು ಸಂದರ್ಶಕರ ಪುಸ್ತಕದಲ್ಲಿ ನಮೂದಿಸಬೇಕು ಹಾಗೂ ಸಹಿ ಮಾಡಬೇಕು.
- ಸಂದರ್ಶಕರ ಗುರುತಿನ ಚೀಟಿ, ವಿಳಾಸ ಪುರಾವೆಗಳ ಪ್ರತಿಯನ್ನು ಮತ್ತು ಸಂದರ್ಶಕರ ಫೋಟೋವನ್ನು ಮಗುವನ್ನು ಭೇಟಿ ಮಾಡಿಸುವ ಮುನ್ನ ತೆಗೆದುಕೊಳ್ಳತಕ್ಕದ್ದು ಮತ್ತು ಗುರುತಿನ ವಿವರಗಳನ್ನು ನೀಡಲು ನಿರಾಕರಿಸಿದ ಸಂದರ್ಶಕರಿಗೆ ಮಗುವಿನ ಭೇಟಿಗೆ ಅವಕಾಶ ನಿರಾಕರಿಸತಕ್ಕದ್ದು.
- ಎಲ್ಲಾ ಭೇಟಿಗಳೂ ಮಕ್ಕಳ ಕಲ್ಯಾಣ ಅಧಿಕಾರಿ / ಪ್ರೊಬೇಷನ್ ಅಧಿಕಾರಿಯ ಸಮ್ಮುಖದಲ್ಲಿಯೇ ಆಗಬೇಕು ಮತ್ತು ಇವರು ಯಾವದೇ ವ್ಯತ್ಯಾಸಗಳಿಗೆ ಹೊಣೆಗಾರರಾಗುತ್ತಾರೆ ಮತ್ತು ಮಕ್ಕಳು ಸಂದರ್ಶಕರನ್ನು ಭೇಟಿ ಮಾಡುವಾಗ ಇವರು ಅವರನ್ನು ಗಮನಿಸಲು ಸಾಧ್ಯವಾಗುವಷ್ಟು ಅಂತರದಲ್ಲಿದ್ದು ಯಾವುದೇ ಆಕ್ಷೇಪಾರ್ಹ ಮತ್ತು ನಿಷೇಧಿತ ವಸ್ತುಗಳ ವಿನಿಮಯವಾಗದಂತೆ ನಿಗಾವಹಿಸಬೇಕು.

- ಸಂದರ್ಶಕರ ಭೇಟಿಯ ಮುನ್ನ ಮಗುವನ್ನು ತಪಾಸಣೆ ಮಾಡಿದಾಗ ಕಂಡು ಬಂದಂತಹ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳಬೇಕು ಮತ್ತು ಅಧೀಕ್ಷಕರು ವಿಚಾರಣೆ ನಡೆಸಿ, ಪಾಲನಾ ಸಂಸ್ಥೆಯ ಸಿಬ್ಬಂದಿಗಳ ಪಾತ್ರವಿದ್ದಲ್ಲಿ ಸೂಕ್ತ ಶಿಸ್ತು ಕ್ರಮವಹಿಸಿ, ವಿಚಾರಣೆಯ ವಿವರವಾದ ವರದಿಗಳನ್ನು ಮೇಲಾಧಿಕಾರಿಗಳಿಗೆ ಮತ್ತು ಮಂಡಳಿ ಅಥವಾ ಸಕ್ಷಮ ನ್ಯಾಯಾಲಕ್ಕೆ ಸಲ್ಲಿಸುವುದು.

- ಸಂದರ್ಶಕರ ಭೇಟಿಯ ನಂತರದಲ್ಲಿ ಮಗುವಿನ ಬಳಿ ಯಾವುದೇ ನಿಷೇಧಿತ ವಸ್ತುಗಳಿದ್ದಲ್ಲಿ ಅದನ್ನು ವಶಪಡಿಸಿಕೊಂಡು, ಕಾನೂನು ಕ್ರಮ ವಹಿಸಬೇಕಾದ ಅಕ್ರಮ ವಸ್ತುಗಳು ದೊರೆತಲ್ಲಿ ಸಂದರ್ಶಕರನ್ನು ಹೋಗದಂತೆ ತಡೆದು, ಪೋಲೀಸರಿಗೆ ಮಾಹಿತಿ ನೀಡಿ ಕಾನೂನು ಕ್ರಮವಹಿಸುವುದು.
- ಸಂದರ್ಶಕರ ಭೇಟಿಯ ಅವಕಾಶವನ್ನು ಮಗುವು ದುರುಪಯೋಗಪಡಿಸಿಕೊಂಡ ಸಂದರ್ಭದಲ್ಲಿ ನಿರ್ದಿಷ್ಟ ಕಾಲಾವಧಿಯವರೆಗೆ ಅಧೀಕ್ಷಕರು ಸಂದರ್ಶಕರ ಭೇಟಿಗೆ ನಿರ್ಬಂಧ ಹೇರಬಹುದು.
- ಮಗುವಿನ ಪೋಷಕರು ಅಥವಾ ಸಂಬಂಧಿಗಳೇ ಮಗುವಿನ ಹಿಂಸಚಾರ, ನಿಂದನೆ ಮತ್ತು ಶೋಷಣೆ ಎಸಗಿದ್ದಲ್ಲಿ ಅಂತಹ ಪೋಷಕರಿಗೆ ಮಗುವನ್ನು ಭೇಟಿ ಮಾಡಲು ಅವಕಾಶ ನೀಡಬಾರದು (ನ್ಯಾಯಾಲಯದಿಂದ ಅನುಮತಿ ಅಥವಾ ಆಪ್ತ ಸಮಾಲೋಚಕರಿಂದ ನಿರ್ದೇಶನ ಇರುವ ಪ್ರಕರಣಗಳನ್ನು ಹೊರತುಪಡಿಸಿ).
- ಅಧೀಕ್ಷಕರು ಮಗುವು ತನ್ನ ಪೋಷಕರೊಂದಿಗೆ ವಾರಕ್ಕೊಮ್ಮೆ ದೂರವಾಣಿ ಮುಖಾಂತರ ಮಾತನಾಡಲು ಪ್ರೊಬೇಷನ್ ಅಧಿಕಾರಿ / ಮಕ್ಕಳ ಕಲ್ಯಾಣ ಅಧಿಕಾರಿ ಇವರ ಮೇಲ್ವಿಚಾರಣೆಯಲ್ಲಿ ಅವಕಾಶ ಮಾಡಿಕೊಡಬೇಕು ಮತ್ತು ದಾಖಲೆ ನಿರ್ವಹಿಸಬೇಕು.
- ಮಕ್ಕಳ ಕಲ್ಯಾಣ ಅಧಿಕಾರಿ/ ಪ್ರೊಬೇಷನರಿ ಅಧಿಕಾರಿಯ ಸಮ್ಮುಖದಲ್ಲಿ ಮಕ್ಕಳು ತಮ್ಮ ಪೋಷಕರೊಂದಿಗೆ ವಾರಕ್ಕೊಮ್ಮೆ ದೂರವಾಣಿ ಮುಖಾಂತರ ಮಾತನಾಡಲು ಅಧೀಕ್ಷಕರು ವ್ಯವಸ್ಥೆ ಮಾಡಿಕೊಡಬೇಕು ಮತ್ತು ಅಂತಹ ಕರೆಗಳ ದಾಖಲಾತಿಯನ್ನು ನಿರ್ವಹಿಸುವುದು.

**ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಮೇಲೆ ದೌರ್ಜನ್ಯವು ಘಟಿಸಿದಾಗ ವಹಿಸಬೇಕಾದ ಕ್ರಮಗಳು:**

- ಮಕ್ಕಳ ಮೇಲೆ ಯಾವುದೇ ರೀತಿಯ ಹಿಂಸೆ, ಶೋಷಣೆಗಳು ನಡೆದ ಸಂದರ್ಭದಲ್ಲಿ ಪಾಳಿಯ ಸಿಬ್ಬಂದಿಗಳು ಕೂಡಲೇ ಸಂಸ್ಥೆಯ ಮುಖ್ಯಸ್ಥರು / ಅಧೀಕ್ಷಕರ ಗಮನಕ್ಕೆ ತರತಕ್ಕದ್ದು.
- ದೈಹಿಕ, ಭಾವನಾತ್ಮಕ, ಲೈಂಗಿಕ ದೌರ್ಜನ್ಯಗಳ ಆಪಾದನೆಗಳು ಅಧೀಕ್ಷಕರ ಗಮನಕ್ಕೆ ಬಂದ ಕೂಡಲೇ ವರದಿಯನ್ನು ಮಂಡಳಿ / ಸಮಿತಿಯ ಮುಂದೆ ಇಡುವುದು ಮತ್ತು ಸಮಿತಿ / ಮಂಡಳಿಯು ವಿಶೇಷ ತನಿಖೆಗೆ ಆದೇಶಿಸುವುದು.
- ಸಂಸ್ಥೆಯ ಮುಖ್ಯಸ್ಥರು / ಅಧೀಕ್ಷಕರು ಘಟನೆಯ ಕುರಿತು ವ್ಯವಸ್ಥಾಪನಾ ಯಾವುದೇ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸಂಸ್ಥೆಯ ಅಧಿಕಾರಿ/ ಸಿಬ್ಬಂದಿಗಳಿಂದ ಯಾವುದೇ ರೀತಿಯ ಅಪರಾಧಗಳು ಘಟಿಸಿದಾಗ ಎಲ್ಲಾ ಮಕ್ಕಳನ್ನು ಸೂಕ್ತವಾದ ಬೇರೊಂದು ಸಂಸ್ಥೆಗೆ ಸ್ಥಳಾಂತರಿಸಲು ಮತ್ತು ಸದರಿ ಸಂಸ್ಥೆಯ ಬಾಲನ್ಯಾಯ ನೋಂದಣಿ ಕಾಯ್ದೆಯನ್ನು ರದ್ದುಪಡಿಸಲು ಮತ್ತು ಮಾನ್ಯತೆಯನ್ನು ಹಿಂಪಡೆಯಲು ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಕ್ರಮವಹಿಸಬೇಕು.
- ಮಕ್ಕಳ ಮೇಲೆ ದೌರ್ಜನ್ಯವೆಸಗಿದ ಅಧಿಕಾರಿ/ಸಿಬ್ಬಂದಿಗಳ ಮೇಲೆ ಎಫ್.ಐ.ಆರ್ ದಾಖಲಿಸಿ ಪ್ರಕರಣವು ಬಾಕಿ ಇರುವ ಅವಧಿಯಲ್ಲಿ ಆ ವ್ಯಕ್ತಿಯು ಯಾವುದೇ ಮಕ್ಕಳ ಸಂಸ್ಥೆಯೊಂದಿಗೆ ನೇರವಾಗಿ ಕೆಲಸ ನಿರ್ವಹಿಸದಂತೆ ಅಗತ್ಯ ಶಿಸ್ತು ಕ್ರಮ ಜರುಗಿಸಬೇಕು.

- ಮಗು ಮತ್ತು ಅದರ ಕುಟುಂಬಕ್ಕೆ ಅಗತ್ಯ ಕಾನೂನು ನೆರವನ್ನು ಒದಗಿಸಬೇಕು.
- ಆಹಾರ, ಬಟ್ಟೆ, ತುರ್ತು ವೈದ್ಯಕೀಯ ಚಿಕಿತ್ಸೆ, ಆಪ್ತ ಸಮಾಲೋಚನೆಯನ್ನು ಹಾಗೂ ಮಾನಸಿಕ ಬೆಂಬಲವನ್ನು ಮಗುವಿಗೆ ಕೂಡಲೇ ನೀಡಬೇಕು.
- ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದಲ್ಲಿ ಕೂಡಲೇ ಹತ್ತಿರದ ಜಿಲ್ಲಾ ಆಸ್ಪತ್ರೆ ಅಥವಾ ಒನ್ ಸ್ಟಾಪ್ ಸೆಂಟರ್‌ನಲ್ಲಿ ಪರೀಕ್ಷೆ ಮತ್ತು ಚಿಕಿತ್ಸೆ ಒದಗಿಸುವುದು ಮತ್ತು ಪೋಕ್ಸೋ 2012 ಕಾಯ್ದೆಯ ಸೆಕ್ಷನ್ 19ನ್ನು ಪಾಲಿಸತಕ್ಕದ್ದು.
- ಮಂಡಳಿ ಅಥವಾ ಸಮಿತಿಯು ಸ್ಥಳೀಯ ಪೋಲೀಸ್ ಠಾಣೆ / ಮಕ್ಕಳ ವಿಶೇಷ ಪೋಲೀಸ್ ಘಟಕ ಪ್ರಕರಣವನ್ನು ದಾಖಲಿಸಲು ಮತ್ತು ಸೂಕ್ತ ತನಿಖೆ ನಡೆಸಲು ನಿರ್ದೇಶನ ನೀಡುವುದು.
- ಮಂಡಳಿ ಅಥವಾ ಸಮಿತಿಯು ಹಿಂಸೆ ಅಥವಾ ಶೋಷಣೆಗಳೇನಾದರೂ ಘಟಿಸಿರುವ ಕುರಿತು ಮಕ್ಕಳ ಸಮಿತಿಗಳನ್ನು ವಿಚಾರಿಸಿ ತಿಳಿದುಕೊಳ್ಳುವುದು ಮತ್ತು ಮಕ್ಕಳಿಗೆ ಅಗತ್ಯ ನೆರವು ನೀಡಲು ಪರಿಣಿತ ಸ್ವಯಂ ಸೇವಾ ಸಂಸ್ಥೆಗಳು, ಮಾನಸಿಕ ಆರೋಗ್ಯ ತಜ್ಞರು, ಬಿಕ್ಕಟ್ಟು ನಿವಾರಣಾ ಘಟಕಕಗಳ ನೆರವು ಪಡೆಯಬಹುದಾಗಿದೆ.
- ಮಕ್ಕಳ ಮೇಲೆ ಅಪರಾಧಗಳು ಜರುಗಿದಾಗ ಯಾವ ರೀತಿ ಮಕ್ಕಳಿಗೆ ವಿಶೇಷ ಕಾಳಜಿಯನ್ನು ವಹಿಸಬೇಕು ಎಂಬುದರ ಕುರಿತು ಮಕ್ಕಳ ಪಾಲನಾ ಸಂಸ್ಥೆಗಳ ಅಧಿಕಾರಿ ಸಿಬ್ಬಂದಿಗಳು, ಪೋಲೀಸ್ ಸಿಬ್ಬಂದಿಗಳು, ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ ಮತ್ತು ನ್ಯಾಯಾಲಯದ ಕರ್ಮಚಾರಿಗಳಿಗೆ ಸಂವೇದನಾಶೀಲ ತರಬೇತಿಗಳನ್ನು ಹಮ್ಮಿಕೊಳ್ಳಬೇಕು.

ಮೇಲ್ಕಂಡಂತೆ ಸುರಕ್ಷತಾ ಮತ್ತು ಭದ್ರತಾ ನಿಯಮಗಳನ್ನು ಮಕ್ಕಳ ಪಾಲನಾ ಸಂಸ್ಥೆಗಳು ಅನುಸರಿಸಿದಲ್ಲಿ, ಮಕ್ಕಳು ಸುರಕ್ಷಿತ ಮತ್ತು ಬೆಳವಣಿಗೆಗೆ ಪೂರಕ ವಾತಾವರಣದಲ್ಲಿ ಬೆಳೆಯಲು ಸಹಕಾರಿಯಾಗುತ್ತದೆ ಹಾಗೂ ಮಕ್ಕಳು ತಮ್ಮ ಪೂರ್ಣ ಸಾಮರ್ಥ್ಯಕ್ಕೆ ಅನುಗುಣವಾಗಿಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ.

9/1/24

(ಆರ್. ಲತಾ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ.